ದಿನಾಂಕ 18.08.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಎಸ್.ವೈ.ಎಸ್., ವಕೀಲರಿಂದಃ-

ನನಗೆ ಈಗ 54 ವರ್ಷ ವಯಸ್ಸು. ನಾನು ಗೃಹಿಣಿ. ಈ ಅಪಘಾತಕ್ಕೆ ಸಂಬಂಧಿಸಿದಂತೆ ವಿಮೆ ಕಂಪನಿಯವರು ತನಿಖೆಗಾಗಿ ನಮ್ಮ ಮನೆಗೆ ಬಂದಿದ್ದ ಸಂದರ್ಭದಲ್ಲಿ ನಾನು ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದು ನನಗೆ ಮಾಸಿಕ 8,000/- ರೂಗಳ ಆದಾಯವಿದೆ ಎಂದು ಅವರಿಗೆ ಹೇಳಿದ್ದೆ ಎನ್ನುವುದು ಸರಿಯಲ್ಲ. ನನಗೆ ಒಬ್ಬನೇ ಮಗ. ನಮ್ಮ ಕುಟುಂಬದ ಪಡಿತರ ಚೀಟಿಯಿದ್ದು ಅದನ್ನು ಹಾಜರುಪಡಿಸಿದ್ದೇನೆ.

2. ಅಪಘಾತವಾದ ದಿನ ನನ್ನ ಮಗ ಆತನ ಸ್ನೇಹಿತ ಸಂಜಯ್‌ನೊಂದಿಗೆ ಹೋಗಿದ್ದನು. ಸದರಿ ಸಂಜಯ್ ನನಗೆ ಪರಿಚಯಸ್ಥನಲ್ಲ. ನನ್ನ ಮಗನ ಚಾಲನಾ ಪರವಾನಗಿ ಇದ್ದು ಅಪಘಾತ ಸಮಯದಲ್ಲಿ ನನ್ನ ಮಗ ವಾಹನ ಚಾಲನೆ ಮಾಡುತ್ತಿರಲಿಲ್ಲ. ನನ್ನ ಮಗನ ಚಾಲನಾ ಪರವಾನಗಿ ಈಗ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಅಪಘಾತದ ಸಮಯದಲ್ಲಿ ನನ್ನ ಮಗನ ಎಲ್ಲಾ ದಾಖಲಾತಿಗಳನ್ನು ತೆಗೆದುಕೊಂಡುಬಿಟ್ಟಿದ್ದಾರೆ ಎಂದು ನುಡಿಯುತ್ತಾರೆ. ಈ ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎನ್ನುವುದು ನಿಜ. ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದವರನ್ನು ವಿಚಾರಣೆ ಮಾಡಬಹುದೇ? ಎಂದರೆ ಸಾಕ್ಷಿಯು ಅಪಘಾತದ ಕುರಿತು ನಮಗೆ ಪೊಲೀಸರೇ ತಿಳಿಸಿದ್ದು ಎಂದು ನುಡಿಯುತ್ತಾರೆ. ಅಪಘಾತದ ಸಮಯದಲ್ಲಿ ನನ್ನ ಮಗ ಬೈಕನ್ನು ಚಾಲನೆ ಮಾಡುತ್ತಾ ಹೋಗಿ ಆತನ

ತಪ್ಪಿನಿಂದ ಅಪಘಾತ ಸಂಭವಿಸಿ ಮೃತ ಹೊಂದಿದ್ದಾನೆ ಎನ್ನುವುದು ಸರಿಯಲ್ಲ. ಪೊಲೀಸ್ ದಾಖಲಾತಿಗಳ ಪ್ರಕಾರ ಇಬ್ಬರು ವ್ಯಕ್ತಿಗಳು ಮದ್ಯಪಾನ ಮಾಡಿ ಅವರ ಪೈಕಿ ಒಬ್ಬ ವ್ಯಕ್ತಿ ರಸ್ತೆಯ ಮೇಲೆ ಮೃತ ಹೊಂದಿದ್ದು ಮತ್ತೊಬ್ಬ ಗಾಯಾಳಾವಾಗಿದ್ದು ಇಬ್ಬರನ್ನೂ ಸಹ ಆಸ್ಪತ್ರೆಗೆ ದಾಖಲಿಸಿರುವುದಾಗಿ ಕಾಣಿಸಲಾಗಿದೆ ಎನ್ನುವ ಬಗ್ಗೆ ನಾನು ತಿಳಿದುಕೊಂಡಿಲ್ಲ. ಈ ಅಪಘಾತವು ನನ್ನ ಮಗ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದ ಕಾರಣದಿಂದ ಸಂಭವಿಸಿದೆ ಎನ್ನುವುದು ಸರಿಯಲ್ಲ. ನನ್ನ ಮಗ ಪ್ಲಂಬರ್, ಪೇಂಟಿಂಗ್ ಹಾಗೂ ಕೂಲಿ ಕೆಲಸ ಮಾಡುತ್ತಿದ್ದ. ನನ್ನ ಮಗ ಡಿಪ್ಲೋಮಾ ಓದಿದ್ದ. ಈ ಸಂಬಂಧ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ನಿಜ.

3. ನನ್ನ ಪ್ರಮಾಣಪತ್ರದ 3 ನೇ ಖಂಡಿಕೆಯಲ್ಲಿ ಕಾಣಿಸಲಾದ ಖರ್ಚು-ವೆಚ್ಚಗಳಿಗೆ ಸಂಬಂಧಿಸಿದಂತೆ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ನಿಜ. ನನ್ನ ಮಗನಿಗೆ ಮದುವೆಯಾಗಿರಲಿಲ್ಲ ಎನ್ನುವುದು ನಿಜ. ನನ್ನ ಮಗನ ಸಾವಿನಿಂದ ನನಗೆ ಯಾವುದೇ ಆರ್ಥಿಕ ನಷ್ಟವಾಗಿಲ್ಲ ಎನ್ನುವುದು ಹಾಗೂ ಕೇವಲ ಪ್ರೀತಿ ವಾತ್ಸಲ್ಯವನ್ನು ಕಳೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಈಗಲೂ ಸಹ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಾ ಮಾಸಿಕ 8,000/- ರೂಗಳ ಆದಾಯ ಹೊಂದಿದ್ದು ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಅಪಘಾತ ನನ್ನ ತಪ್ಪಿನಿಂದಲೇ ಸಂಭವಿಸಿದ್ದು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.